ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ:03:ಅಸಾವಿ:2023-24:ಉಗ್ರಾಣ ದಿನಾಂಕ: 08.01.2024.

## ಹಿಂಪಡೆ ಹಾಗೂ ಮಾರ್ಪಾಡು ಆದೇಶ

ವಿಷಯ: ಕಾಲೇಜು ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಅನುಪಯುಕ್ತ / ನಿರುಪಯುಕ್ತ ಸಾಮಾಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ:
1. ಆಯುಕ್ತಾಲಯದ ಸುತ್ತೋಲೆ ಸಂಖ್ಯೆ: ಕಾಶಿಇ/11/ಅಕಾನಿಸಾ/ ಉಗ್ರಾಣ/ 2013-14 ದಿನಾಂಕ:05.09.2022.
2. ಆಯುಕ್ತಾಲಯದ ಸುತ್ತೋಲೆ ಸಂಖ್ಯೆ: ಕಾಶಿಇ/03/ಅಸಾವಿ/ 2023-24/ಉಗ್ರಾಣ ದಿನಾಂಕ:30.10.2023.
3. ಸರ್ಕಾರದ ಆದೇಶ ಸಂಖ್ಯೆ:ಆಇ/03/ಟಿಎಸ್‌ಪಿ/2018, ದಿನಾಂಕ:14.05.2018.
4. ಈ ಕಛೇರಿ ಸುತ್ತೋಲೆ ಸಂಖ್ಯೆ:ಡಿಸಿಇ/06/ಬಿಯುಡಿ/91-92 ದಿನಾಂಕ:27.01.1992.
5. ಸರ್ಕಾರದ ಆದೇಶ ಸಂಖ್ಯೆ:FD/03/TFP/1980 dt:29.04.1981.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2)ರಲ್ಲಿ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅನುಪಯುಕ್ತ ಸಾಮಾಗ್ರಿಗಳನ್ನು ವಿಲೇವಾರಿ ಮಾಡುವ ಸಂಬಂಧ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಗಳ ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು, ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ಹಾಗೂ ಈ ಕಛೇರಿಯ ಉಲ್ಲೇಖ (4)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಾನಾಂತರ ಹುದ್ದೆ ಎಂದು ಪರಿಗಣಿಸಿರುವ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (5)ರ ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ ಇಲಾಖಾ ಮುಖ್ಯಸ್ಥರು / ವಿಭಾಗ / ಜಿಲ್ಲೆ / ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪ್ರತ್ಯಾಯೋಜಿಸಿದ್ದು, ಈ ಅಧಿಕಾರದ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿರುವ ನಿರುಪಯುಕ್ತ ಸಾಮಾಗ್ರಿಗಳನ್ನು ಪಟ್ಟಿ ಮಾಡಿ, ದುರಸ್ಥಿಪಡಿಸಿ ಉಪಯೋಗಿಸಲು ಸಾಧ್ಯವಿರುವ ಸಾಮಾಗ್ರಿಗಳನ್ನು ದುರಸ್ಥಿಪಡಿಸಿ ಉಪಯೋಗಿಸಲು ಹಾಗೂ ದುರಸ್ಥಿಪಡಿಸಲು ಸಾಧ್ಯವಾಗದಿದ್ದ ಸಾಮಾಗ್ರಿಗಳನ್ನು ಉಲ್ಲೇಖ (3) (4) ಮತ್ತು (5)ರ ಆದೇಶ / ಸುತ್ತೋಲೆ / ಜ್ಞಾಪನ ಪ್ರಕಾರ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ.
2. ಆಯುಕ್ತರು, ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು, ಹೆಚ್ಚುವರಿ ನಿರ್ದೇಶಕರು ಮತ್ತು ಲೆಕ್ಕಾಧಿಕಾರಿಗಳ ಆಪ್ತ ಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
3. ಕಛೇರಿ ಪ್ರತಿ.

PROCEEDINGS OF THE GOVERNMENT OF KARNATAKA

Subj: General delegation of common financial powers to Heads of Departments and others - Review of - Notifying the Officers of Government Departments for exercising the powers at Divisional/District/Sub-divisional Taluk levels.

-oOo-

ORDER NO.FD 3 TFP 80, B'LORE, DATED: 29-4-81

Read: G.O.No.FD 3 TFP 80 dated 7-10-1980.

PREAMBLE

In response to para 6 of G.O. No.FD 3 TFP 80 dated 7-10-1980 some of the Heads of Departments have intimated the designations of Officers under them who will exercise the powers of the Divisional/District/Sub-Divisional/Taluk level officers as delegated by aforesaid G.O.

ORDER

Government are pleased to notify the officers of Government Departments as in the Annexure to this G.O., who would exercise the common financial powers delegated by G.O.No.FD 3 TFP 80 dated 7-10-1980 at the Divisional/District/Sub-Divisional/Taluk levels of their respective Departments with immediate effect.

2 Other Heads of Departments are requested to furnish the requisite information to this Department as per G.O.No.FD 3 TFP 80 dated 7-10-1980.

By Order and in the name of the Governor of Karnataka,
Sd/-
(M E PRAKASH)
Addl.Secretary to Government,
Finance Department.

ANNEXURE TO G.O.NO.FD 3 TFP 80 DATED: 29-4-81

| Name of Department | Divisional level officer | District level Officer | Sub-Divisional level officer | Taluk level Officer |
|---|---|---|---|---|
| | IV. EDUCATION & Y.S. DEPARTMENT | | | |
| 3. Director of Collegiate Education | Regional Deputy Directors | Principals of Government Colleges | - | - |

Sd/-(FLN RAO)
Under Secretary to Govt.,
Finance Department(Budget)

// TRUE COPY //

DIRECTOR OF COLLEGIATE EDUCATION.

sri/-

GOVERNMENT OF KARNATAKA

No. DCE 6 BUD 1 91-92

Office of the
Director of Collegiate Education
in Karnataka, Bangalore-560001,

27 Jan 92.

CIRCULAR

Subj:- General delegation of common financial powers to heads of Departments and others.

Refs:- (1) G.O.No.FD 3 TFP 80 B'lore Dt.29-4-91.

(2) G.O.No.FD 3 TFP 80 B'lore Dt.29-4-81 Annexure.

(3) G.O.No.FD 7 TFP 91 B'lore Dt.16-9-91.

xxxxx

The Government in its Order cited at ref.(1) had indicated the General delegation of common financial powers to heads of Departments and others. In the Annexure appended to the said Government Order the Regional Deputy Directors and the Principals of Government Colleges have been classified under the Divisional level Officers and District level Officers category respectively for the purpose of exercise of common financial powers.

Further, in the Government Order cited at ref.(3) above, the Government has enhanced the common financial powers as specified in the Annexure to the said Order to all the heads of Departments and other Departmental Officers.

A copy of the Government Order alongwith the Annexure is herewith forwarded for your guidance.

It is instructed that the respective Officers would adhere to and exercise the powers as notified in the Annexure.

17.2.92

DIRECTOR OF COLLEGIATE EDUCATION

To:

1. All the Officers of the Directorate.
2. All the Deputy Directors of Regional Offices at Bangalore, Mysore, Dharwar, Gulbarga and Mangalore.
3. Principals of all the Government First Grade Colleges in the State.
4. All the Superintendents in the Directorate.
5. Office Copy.

Gsb/-

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ:ಎಫ್‌ಡಿ 01 ಟಿಎಫ್‌ಪಿ 2001, ದಿ:02.02.2001.

2) ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಪಿ 2010, ದಿ:30.04.2010.

3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿ13.12.2017 ಮತ್ತು ದಿ:25.04.2018 ರಂದು ನಡೆದ ಸಭೆ.

*********

ಪ್ರಸ್ತಾವನೆ:

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಇಲಾಖಾ ಮುಖ್ಯಸ್ಥರುಗಳು, ವಿಭಾಗೀಯ ಮಟ್ಟದ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು, ಉಪ ವಿಭಾಗೀಯ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪರಿಷ್ಕರಿಸಲಾಗಿತ್ತು.

2. ಸಾಮಾನ್ಯ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು 2010 ರಲ್ಲಿ ಪರಿಷ್ಕರಿಸಲಾಗಿದೆ. ಸಾಮಾನ್ಯ ಆರ್ಥಿಕ ಪ್ರತ್ಯಾಯೋಜನೆ ಆದೇಶ ಹೊರಡಿಸಿ ಸುಮಾರು ಎಂಟು ವರ್ಷಗಳು ಆಗಿರುವುದರಿಂದ ಅದರಲ್ಲಿರುವ ಆರ್ಥಿಕ ಪ್ರತ್ಯಾಯೋಜನೆಯ ಮಿತಿಗಳನ್ನು ಸೂಕ್ತವಾಗಿ ಪರಿಷ್ಕರಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮೇಲೆ (3)ರಲ್ಲಿ ಓದಲಾದಂತೆ ನಡೆದ ಸಭೆಗಳಲ್ಲಿ ತೀರ್ಮಾನಿಸಲಾಗಿರುತ್ತದೆ. ಮತ್ತು ಅದರಂತೆ ಸರ್ಕಾರದ ವಿವಿಧ ಇಲಾಖೆಗಳಿಂದ ಆರ್ಥಿಕ ಅಧಿಕಾರ ಪರಿಷ್ಕರಣೆಗಾಗಿ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗಿದೆ.

3. ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವಂತೆ ಅಧಿಕಾರಗಳನ್ನು ವಿಂಗಡಿಸಿ ಈ ಆದೇಶದ ವ್ಯಾಪ್ತಿಯಲ್ಲಿ ತಂದಿದ್ದರೂ ಸಹ ಕೆಲವೊಂದು ಇಲಾಖೆಗಳ ಕಾರ್ಯನಿರ್ವಹಣೆ ವಿಭಿನ್ನವಾಗಿದ್ದು, ಅಧಿಕಾರಗಳ ವಿಧ, ಅಧಿಕಾರದ ಮಿತಿ ಬೇರೆಯಾಗಿರುತ್ತದೆ. ಉದಾ: ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಇತ್ಯಾದಿ. ಆದ್ದರಿಂದ ಅಂತಹ ಇಲಾಖೆಗಳಿಗೆ ನೀಡಲಾಗಿರುವ ವಿಶೇಷ ಆರ್ಥಿಕ ಅಧಿಕಾರಗಳೂ ಸಹ ಮುಂದುವರಿಯುತ್ತದೆ.

4. ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಪ್ರಸ್ತುತ ದಿನಗಳಲ್ಲಿ ಸರಕು ಸಾಮಗ್ರಿಗಳ ಬೆಲೆ ಹೆಚ್ಚಾಗಿರುವುದರಿಂದ ಹಾಗೂ ವಸ್ತುಗಳ ದರವು ದುಬಾರಿಯಾಗಿರುವುದರಿಂದ ಪ್ರಸ್ತುತವಿರುವ ಆರ್ಥಿಕ ಮಿತಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದನ್ನು ಸರ್ಕಾರವು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

ಪು.ತಿ.ನೋ.

2

**ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ಬೆಂಗಳೂರು,**
**ದಿನಾಂಕ:14-05-2018.**

ಪ್ರಸ್ತಾವನೆಗಳನ್ನು ಪರಿಶೀಲಿಸಿ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಹಾಗೂ ಇನ್ನಿತರ ಇಲಾಖಾಧಿಕಾರಿಗಳಿಗೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವಂತೆ ಸಾಮಾನ್ಯ ಆರ್ಥಿಕ ಅಧಿಕಾರಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

2. ಈ ಆದೇಶದ ಕಂಡಿಕೆ 5 ನ್ನು ಹೊರತುಪಡಿಸಿ, 1967ರ ಆರ್ಥಿಕ ಅಧಿಕಾರ ಕೈಪಿಡಿಯಲ್ಲಿನ 3ನೇ ಅಧ್ಯಾಯದಲ್ಲಿ ಇರುವ ಅಧಿಕಾರಗಳನ್ನು ಹಾಗೂ ಈವರೆಗೆ ಹೊರಡಿಸಿರುವ ಎಲ್ಲಾ ಸಾಮಾನ್ಯ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ ಆದೇಶಗಳನ್ನು ಈ ಆದೇಶವು ಉತ್ಕ್ರಮಿಸುತ್ತದೆ (supercede).

3. ಈ ಆದೇಶದ ಅನುಬಂಧದಲ್ಲಿ ಒಳಗೊಂಡಿರುವ ಕೆಲವು ಅಂಶಗಳ ಬಗ್ಗೆ ವಿಶೇಷ ಅಧಿಕಾರವನ್ನು ಇಲಾಖೆಗಳಿಗೆ ಪ್ರತ್ಯಾಯೋಜಿಸಿದ್ದಲ್ಲಿ, ಅಂತಹ ಇಲಾಖೆಗಳು ವಿಶೇಷ ಆರ್ಥಿಕ ಅಧಿಕಾರ ಅಥವಾ ಸಾಮಾನ್ಯ ಆರ್ಥಿಕ ಅಧಿಕಾರ ಇವುಗಳಲ್ಲಿ ಯಾವುದಾದರೊಂದನ್ನು ಚಲಾಯಿಸಬೇಕಾಗುತ್ತದೆ. ಎರಡೂ ಅಧಿಕಾರಗಳನ್ನು ಚಲಾಯಿಸುವಂತಿಲ್ಲ.

4. ಯಾವುದೇ ಪ್ರಾಧಿಕಾರಿಗಳು ಈ ಆದೇಶದಲ್ಲಿರುವ ಯಾವುದೇ ಅಧಿಕಾರವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪುನರ್ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.

5. ಈ ಆದೇಶದಲ್ಲಿ ಹೊರಡಿಸಿದ ಅಧಿಕಾರಗಳನ್ನು ಸರ್ಕಾರದ ಆದೇಶ ಸಂ: ಎಫ್‌ಡಿ 02 ಟಿಎಫ್‌ಪಿ 2016, ದಿ:20.01.2016 ಹಾಗೂ ತದನಂತರದ ಪರಿಷ್ಕೃತ/ಸೇರ್ಪಡೆ/ತಿದ್ದುಪಡಿ ಆದೇಶಗಳಲ್ಲಿ ಅಧಿಸೂಚಿಸಿದ ಅಧಿಕಾರಿಗಳು ಮಾತ್ರ ಚಲಾಯಿಸಬಹುದಾಗಿದೆ.

6. ಈ ಆದೇಶವು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

14/5/18

**(ಹೆಚ್.ಎ.ಶೋಭ),**
ಸರ್ಕಾರದ ಅಧೀನ ಕಾರ್ಯದರ್ಶಿ
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)
ಆರ್ಥಿಕ ಇಲಾಖೆ.

ಇವರಿಗೆ:-

ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ಪ್ರತಿಗಳು:-

1. ಮಹಾಲೇಖಪಾಲರು (ಎ ಮತ್ತು ಇ), ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಮತ್ತು ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಪೆಟ್ಟಿಗೆ 5329/5369, ಬೆಂಗಳೂರು-1.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ.
3. ಸರ್ಕಾರದ ಕಾರ್ಯದರ್ಶಿಗಳು, (ಖಜಾನೆ-2) ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿ ನಗರ ಬೆಂಗಳೂರು-9.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9. ಸರ್ಕಾರದ ಉಪ ಕಾರ್ಯದಶಿಗಳು/ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಾಖಾಧಿಕಾರಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಿತ ಕಡತ.